<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾದಃ ನ್ಯಾಯಾಲಯಃ ನ.ರಾ.ಪುರ</u>

**ಸಿ.ಸಿ ಃ 378/2020**

ಸಾಕ್ಷಿದಾರರ ಹೆಸರು ಃ ಪ್ರದೀಪ್

ತಂದೆಯ ಹೆಸರು ಃ ಸೋಮಶೇಖರ್

ವಯಸ್ಸು ಃ **62** ವರ್ಷ

ಉದ್ಯೋಗ ಃ ನಿವೃತ್ತ ಆರ್ ಎಫ್ ಓ

ವಾಸಸ್ಥಳ ಃ ಶಿವಮೊಗ್ಗ

ಸಿ.ಡಬ್ಲ್ಯೂ- **12**

ಪಿ.ಡಬ್ಲ್ಯೂ- **8**

ದಿನಾಂಕಃ **27.01.2025** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಃಃ ಮುಖ್ಯ ವಿಚಾರಣೆ ಃ ಮಾನ್ಯ ಃ ಎಪಿಪಿಯವರಿಂದ ಃಃ</u>

ನಾನು ದಿಃ 18.01.2019 ರಿಂದ ದಿಃ28.08.2020 ವರೆಗೆ ಆರ್ ಎಫ್ ಓ ಆಗಿ ನ ರಾ ಪುರ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 02.05.2020 ರಂದು ಚಾಸಾ-1 ರಿಂದ 3 ರವರ ಕರ್ತವ್ಯ ದೃಢೀಕರಣವನ್ನು ಕೋರಿ ಪೊಲೀಸರು ಮನವಿ ಸಲ್ಲಿಸಿದ್ದು ಈ ಸಂಬಂಧ ನಾನು ಸದರಿಯವರ ಕರ್ತವ್ಯ ದೃಢೀಕರಣವನ್ನು ನೀಡಿರುತ್ತೇನೆ.

ಸಾಕ್ಷಿ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಸಾಕ್ಷಿ ದೃಢೀಕರಣವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು.

ದಿನಾಂಕಃ 14.05.2020 ರಂದು ಘಟನಾ ಸ್ಥಳದ ನಕಾಶೆ, ಟೋಪೋ ಶೀಟ್, ಪ್ರಥಮ ವರ್ತಮಾನ ವರದಿಯ ಪ್ರತಿ, ನೋಟಿಫಿಕೇಶನ್ ಕೋರಿ ನನಗೆ ಮನವಿ ಸಲ್ಲಿಸಿದ್ದು, ಈ ಸಂಬಂಧ ನಾನು ಟೋಪೋ ಶೀಟ್ ದೃಢೀಕೃತ ನಕಲು, ನಕಾಶೆಯ ದೃಢೀಕೃತ ನಕಲನ್ನು , ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು, ನೋಟಿಫಿಕೇಶನ್ ದಢೀಕೃತ ನಕಲನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ಮನವಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ಸಾಕ್ಷಿ ಟೋಪೋ ಶೀಟ್ ದೃಢೀಕೃತ ನಕಲು, ನಕಾಶೆಯ ದೃಢೀಕೃತ ನಕಲನ್ನು , ನೋಟಿಫಿಕೇಶನ್ ದಢೀಕೃತ ನಕಲನ್ನು ಹಾಗೂ ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ನೋಡಿ ಗುರುತಿಸಿದ್ದು ಕ್ರಮವಾಗಿ ನಿಪಿ-14 ರಿಂದ 17, ಸಾಕ್ಷಿಯ ಸಹಿಯನ್ನು ನಿಪಿ-14(ಎ) ರಿಂದ 17(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ.ಕೆ ಎಸ್ ಎಸ್ ವಕೀಲರಿಂದ ಃ</u>**

ನಮ್ಮ ಕೇಂದ್ರ ಕಚೇರಿ ಉಂಬಳೇಬೈಲಿನಲ್ಲಿರುತ್ತದೆ ಎಂದರೆ ಸರಿ. ಹೇಳಲಾದ ಘಟನಾ ಸಮಯದಲ್ಲಿ ನಾನು ಆರ್ ಎಫ್ ಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದರೆ ಸರಿ. ನಮ್ಮ ವಲಯದಲ್ಲಿ 3 ಜನ ವಾಚರ್ ಇದ್ದು ಒಬ್ಬ ಅರಣ್ಯ ರಕ್ಷಕ ಇರುತ್ತಾರೆ. ನಮ್ಮ ಸರ್ಕಾರಿ ನೌಕರರಿಗೆ ಕೆಲಸ ಮಾಡುವ ನಿರ್ದಿಷ್ಟ ಸಮಯ ಇರುವುದಿಲ್ಲ. ನಮ್ಮ ಕಚೇರಿಯಿಂದ ದಿನಗೂಲಿ ನೌಕರರು ನೇಮಕ ಆಗಿದ್ದಲ್ಲಿ ಅವರಿಗೆ ತಿಂಗಳ ಸಂಬಳ ಇರುತ್ತದೆ. ವಾಚರ್ ಗಳು ಹಾಜರಾಗಿರುವ ಸಂಬಂಧ ಪ್ರತ್ಯೇಕವಾಗಿ ವಹಿಯಲ್ಲಿ ಸಹಿ ಮಾಡುವುದಿಲ್ಲ. ಯಾವುದೇ ಹಾಜರಾತಿ ಪುಸ್ತಕ ಇರುವುದಿಲ್ಲ. ಹೇಳಲಾದ ಘಟನೆ ಸಮಯದಲ್ಲಿ ಚಾಸಾ-1 ರವರು ಅರಣ್ಯ ರಕ್ಷಕನಾಗಿದ್ದನು. ಸದರಿ ಚಾಸಾ-1 ಹಾಜರಾಗಿರುವ ಸಂಬಂಧ ಯಾವುದೇ ಹಾಜರಾತಿ ಪುಸ್ತಕ ಇರುವುದಿಲ್ಲ. ಸದರಿ ಚಾಸಾ-1 ಚಲನವಲನ ವಹಿಯನ್ನು ಇಟ್ಟುಕೊಂಡಿದ್ದರು. ಸದರಿ ಚಲನವಲನ ವಹಿಯನ್ನು ನನಗೆ ತಿಂಗಳಿಗೊಮ್ಮೆ ತೋರಿಸುತ್ತಿದ್ದರು. ಸದರಿ ಚಾಸಾ-1 ರವರು ಇಟ್ಟುಕೊಂಡಿರುವ ಚಲನವಲನ ವಹಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ದಿನಗೂಲಿ ನೌಕರರಿಗೆ ನಾನು ಅವರ ವೋಚರ್ ಗಳಿಗೆ ಸಹಿ ಪಡೆದು ವೇತನ ನೀಡುತ್ತೇನೆಂದರೆ ಸಾಕ್ಷಿಯು ಫಾರೆಸ್ಟ್ ಗಾರ್ಡ್ ದಿನಗೂಲಿ ನೌಕರರ ಹಾಜರಾತಿ ವಹಿಯನ್ನು ನನಗೆ ಕಳುಹಿಸಿಕೊಡುತ್ತಾರೆ ನಾನು ಅದನ್ನು ಡಿ ಎಫ್ ಓ ರವರಿಗೆ ಕಳಿಸಿದ ನಂತರ ದಿನಗೂಲಿ ನೌಕರರ ಖಾತೆಗೆ ಅವರ ವೇತನ ಜಮಾ ಆಗುತ್ತದೆ ಎಂದು ನುಡಿಯುತ್ತಾರೆ. ದಿನಗೂಲಿ ನೌಕರರ ಹಾಜರಾತಿ ಪುಸ್ತಕ ಇರುತ್ತದೆ ಎಂದರೆ ಸರಿ.

ದಿನಗೂಲಿ ನೌಕರರು ಎಷ್ಟು ಜನ ಕೆಲಸ ಮಾಡುತ್ತಿರುತ್ತಾರೆ ಎಂದು ದಿನನಿತ್ಯ ಹೋಗಿ ಪರಿಶೀಲನೆ ನಡೆಸುವುದಿಲ್ಲ. ಒಬ್ಬ ದಿನಗೂಲಿ ನೌಕರನು ಒಂದು ದಿನಕ್ಕೆ ಬೇಕಾಗುವ ಕೆಲಸ ಮಾಡಿರುತ್ತಾನೋ ಇಲ್ಲವೋ ಎಂದು ನಾನು ಖುದ್ದು ಪರಿಶೀಲನೆ ಮಾಡುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ಪ್ರಕಾರ ನಮ್ಮ ಇಲಾಖೆಯಲ್ಲಿ ದಿನಗೂಲಿ ನೌಕರರು ಎಂದರೆ ಫಾರೆಸ್ಟ್

ವಾಚರ್ ಆಗಿರುತ್ತಾರೆ ನ ರಾ ಪುರದಲ್ಲಿ 3 ಜನ ಇರುತ್ತಾರೆ ಎಂದು ನುಡಿಯುತ್ತಾರೆ. ಫಾರೆಸ್ಟ್ ವಾಚರ್ ಎಂದರೆ ಅರಣ್ಯ ವೀಕ್ಷಕ. ನಮ್ಮ ಇಲಾಖೆಯಲ್ಲಿ ದಿನಗೂಲಿ ನೌಕರರು ಎಂದು ಯಾವುದೇ ಹುದ್ದೆ ಇರುವುದಿಲ್ಲ ಎಂದರೆ ಸರಿ. ದಿನಗೂಲಿ ನೌಕರರು ಯಾರು ಯಾರು ಬರುತ್ತಾರೆಂದು ಏನು ಏನು ಕೆಲಸ ಮಾಡುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿಯವರನ್ನು ಡಿ ಎಫ್ ಓ ರವರು ತೆಗೆದುಕೊಳ್ಳುತ್ತಾರೆಂದು ನುಡಿಯುತ್ತಾರೆ.

ಕಾಡಿಗೆ ಬೇಲಿ ಹಾಕಲು, ಗೊಬ್ಬರ ಹಾಕಲು, ಗಿಡ ನೆಡಲು ನಾವು ದಿನಗೂಲಿ ನೌಕರರನ್ನು ನೇಮಕ ಮಾಡುತ್ತೇವೆಂದರೆ ಸಾಕ್ಷಿಯು ಅದು ಟೆಂಡರ್ ಕರೆಯಲಾಗುತ್ತದೆ ಎಂದು ನುಡಿಯುತ್ತಾರೆ.

ನಿಪಿ-11 ನ್ನು ಪೊಲೀಸರು ತಂದು ಕೊಟ್ಟಿರುತ್ತಾರೆ. ಸದರಿ ನಿಪಿ-11 ಕ್ಕೆ ನಾನು ಅದೇ ದಿನ ದಾಖಲೆ ನೀಡಿರುತ್ತೇನೆ. ಚಾಸಾ-1 ರವರು ಅರಣ್ಯ ರಕ್ಷಕನಾಗಿ ಹಾಗೂ ಚಾಸಾ-2 ಮತ್ತು 3 ರವರು ದಿನಗೂಲಿ ನೌಕರರೆಂದು ಹುದ್ದೆ ಖಾಲಂ ನಲ್ಲಿ ತೋರಿಸಲಾಗಿರುತ್ತದೆ ಎಂದರೆ ಸರಿ. ನಿಪಿ-13 ರಲ್ಲಿ ಆರೋಪಿತರ ವಿರುದ್ಧ ಯಾವುದಾದರೂ ಅರಣ್ಯ ತಕ್ಷೀರು ದಾಖಲಾಗಿರುವ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಅರಣ್ಯ ತಕ್ಷೀರು ವಹಿಯು ಅರಣ್ಯ ರಕ್ಷಕರತ್ತಿರ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಅರಣ್ಯ ತಕ್ಷೀರು ದಾಖಲಾದ ನಂತರ 24 ಗಂಟೆ ಒಳಗೆ ವ್ಯಾಪ್ತಿಯಿರುವ ನ್ಯಾಯಾಲಯಕ್ಕೆ ತಲುಪಿಸಬೇಕು ಎಂದರೆ ಸರಿ.

ಅರಣ್ಯ ತಕ್ಷೀರುನೊಂದಿಗೆ ದಾಖಲಾತಿ ಪಟ್ಟಿ ಮತ್ತು ಮುದ್ದೆ ಮಾಲು ಪಟ್ಟಿ ನೀಡಬೇಕು ಎಂದರೆ ಸರಿ. ನಿಪಿ-17 ಕ್ಕೆ ಸಂಬಂಧಿಸಿ ಯಾವುದೇ ಪಿ ಎಫ್ ಮಹಜರ್ ಇರುವುದಿಲ್ಲ ಎಂದರೆ ಸರಿ. ನಿಪಿ-17 ರಲ್ಲಿ ತೋರಿಸಿರುವ ಆರೋಪಿತರ ವಿರುದ್ದ ಯಾವುದೇ ಅಂತಿಮ ವರದಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಿಪಿ-17 ದಿನಾಂಕಃ 25.04.2020 ರಲ್ಲಿ ದಾಖಲಾಗಿದ್ದು, ಆದರೆ ನಾವು ನ್ಯಾಯಾಲಯಕ್ಕೆ ದಿನಾಂಕಃ 04.05.2020 ರಂದು ನೀಡಿರುತ್ತೇವೆಂದರೆ ಸರಿ. ನಿಪಿ-17 ರಲ್ಲಿ ಜೀವನ್ , ಸಂದೀಪ್ ಮತ್ತು ಪ್ರದೀಪ್ ರವರ ಹೆಸರು ಇರುತ್ತದೆ ಎಂದರೆ ಸರಿ, ಅವರ ವಿಳಾಸ ಇರುವುದಿಲ್ಲ ಎಂದರೆ ಸರಿ. ನಿಪಿ-17 ರಲ್ಲಿ ಯಾವುದೇ ವಾಹನ ಅಥವಾ ಮರ ಕಡಿಯಲು ಉಪಯೋಗಿಸುವ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ.

ನಿಪಿ-17 ನ್ನು ತಯಾರಿಸಿರುವುದು ಚಾಸಾ-1 ರವರು ಆಗಿರುತ್ತಾರೆಂದರೆ ಸರಿ. ನಾನು ನಿಪಿ-12, 14 ರಿಂದ 17 ದಾಖಲೆಗಳನ್ನು ಚಾಸಾ-1 ರವರಿಗೆ ಸಹಾಯ ಮಾಡಲು ಸೃಷ್ಟಿ

ಮಾಡಿರುತ್ತೇನೆಂದರೆ ಸರಿಯಲ್ಲ. ಚಾಸಾ-1 ರವರಿಗೆ ಅನುಕೂಲವಾಗುವ ರೀತಿ ನಾನು ಪೊಲೀಸರು ಯಾವುದೇ ದಾಖಲೆಗಳನ್ನು ಕೇಳದೇ ಇದ್ದರೂ ಹೆಚ್ಚಿನ ದಾಖಲೆಗಳನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು ನಮ್ಮ ವ್ಯಾಪ್ತಿಯ ನೌಕರರು ಆಗದೇ ಇದ್ದರೂ ಅವರನ್ನು ನೌಕರರೆಂದು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ